ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ. **732/2025**

ಸಾಕ್ಷಿಯ ಹೆಸರುಃ ಹುಚ್ಚುರಾಯಪ್ಪ ವೈ ಅಲಿಯಾಸ್ ರಾಯಪ್ಪ ಚಾಸಾ ಃ 4

ತಂದೆ/ ಗಂಡನ ಹೆಸರುಃ ರಾಯಪ್ಪ ಪ್ರಾಸಾಃ 2

ವಯಸ್ಸುಃ 54 ವರ್ಷ

ಉದ್ಯೋಗಃ ತೋಟಗಾರಿಕೆ ಇಲಾಖೆಯಲ್ಲಿ ಕೆಲಸ

ವಾಸಃ ಅಭಿರಾಮನಗರ

ದಿನಾಂಕಃ07/05/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ 1 ರಿಂದ 3 , 5 ಮತ್ತು 6 ನನಗೆ ಗೊತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಆರೋಪಿತರನ್ನು ನೋಡಿರುವುದಿಲ್ಲ.

ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ.

ಮುದ್ದೆ ಮಾಲು 1 ಮತ್ತು 2 ಅನ್ನು ಗುರುತಿಸುವಲ್ಲಿ ಸಾಕ್ಷಿ ನಿರಾಕರಿಸಿರುತ್ತಾರೆ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲು ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ14/06/2025 ರಂದು ನಾನು ಹರಿಹರಪುರ ಠಾಣೆಯಲ್ಲಿ ಹಾಜರಾಗಿದ್ದು ಹೇಳಿಕೆ ನೀಡಿದ್ದು ಸದರಿ ಹೇಳಿಕೆಯಲ್ಲಿ ದಿಃ12/06/2025 ರಂದು ಬೆಳಿಗ್ಗೆ 11 ಗಂಟೆಗೆ ಒಂದು ಲಾರಿ ಮತ್ತು ಟ್ರಾಕ್ಟರನ್ನುತೆಗೆದುಕೊಂಡು ,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,,

,,,,,,, ,,,,,,,,,,,,,,,,,,,,,,,,,,,, ಸುಬ್ರಹ್ಮಣ್ಯನಿಗೆ ಹೊಡೆದು ಗಲಾಟೆ ಮಾಡಿದ ಸಂದೇಶ, ಸುದೀಪ , ಸಂಜಯ, ಮಾಲತೇಶ, ರವಿಗೌಡ , ಬಚ್ಚಣಿಕೆ ಸಂತೋಷ ಹಾಗೂ ಪ್ರಿಯಾನಂದ ಅವರನ್ನು

ಹಾಗೂ ಕೃತ್ಯಕ್ಕೆ ಬಳಸಿದ ಕಲ್ಲುಗಳನ್ನು ನೋಡಿದ್ದು, ಪುನಃ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಹೇಳಿಕೆಯನ್ನು ಸಂಪೂರ್ಣವಾಗಿ ಓದಿ ಹೇಳಿದ್ದು, ಸಾಕ್ಷಿಯು ಹೇಳಿಕೆಯ ಭಾಗವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ.7 ಎಂದು ಗುರುತಿಸಲಾಯಿತು.

ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ. ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ